ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 6ನೆ ಏಪ್ರಿಲ್ 1907ನೆ ಇಸವಿ, ಚಿಕ್ಕಮಗಳೂರು.

ಸ್ರ 1901ನೆ ಇಸವಿ ಡಿಸೆಂಬರು 11ನೆ ಮುಕ್ತಂ ನಂಬರು 9,007—ಲೆ. ಜೆ. 56ನೆ ಗವರ್ನ್‌ಮೆಂಟು ನೋಟಿಫಿಕೇಷನ 5ನೆ ಪ್ಯಾರಾ ಪ್ರಕಾರ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಜಾಲ್ತಿ ಸ್ರ 1907ನೆ ಸಾಲ್ ಏಪ್ರಿಲ್ 1ನೆ ತಾರೀಖು ಲಾಗಾಯಿತು ಸೆಪ್ಟೆಂಬರು 30ನೆ ತಾರೀಖು ವರಿಗೆ ಮೀನುಗಳನ್ನು ಹಿಡಿಯುವುದನ್ನು ನಿಷೇಧ ಮಾಡಿ ಇದೆ.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ.

ಸ್ರ 1907ನೆ ಇಸವಿ ಜನವರಿ ತಾರೀಖು 31ರಲ್ಲು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರಿನಲ್ಲಿ ನಡೆದ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿನ ನಡವಳಿಕೆಗಳು.

ಮೆ॥ ಡಿ. ದೇವರಾಜೇ ಅರಸಿನವರು, ಪ್ರೆಸಿಡೆಂಟರವರು, ಸರ್ಕ್ಯೂಟಿನಲ್ಲಿರುತ್ತಾರೆ.
,, ಎಂ. ಲಕ್ಷ್ಮಣಶಾಸ್ತ್ರಿಗಳವರು, ವೈಸ್ ಪ್ರೆಸಿಡೆಂಟರು ಅಧ್ಯಕ್ಷರಾಗಿದ್ದರು.

ಉದ್ಯೋಗ ಪ್ರಯುಕ್ತ ಮೆಂಬರುಗಳು.

ಸ್ಪೆಶಲ್ ಹಾಜರು.

3. ಮೆ॥ ಕೆ. ವೈಲಾರರಾಯರು, ಡಿವಿಜನಲ್ ಅಸಿಸ್ಟೆಂಟ್ ಕಮಿಷನರು.
4. ,, ಕೆ. ಏಂ. ಅಪ್ಪಯ್ಯನವರು, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
5. ,, ಹೆಚ್. ಜೆ. ಪೊಲ್ಲಾಯಿ ಸಾಹೇಬರು, ಎಗ್ಜಿಕ್ಯೂಟಿವ್ ಇಂಜಿನಿಯರ್.
6. ,, ಹೆಚ್. ಎ. ವೆಂಕಟರಮಣಯ್ಯನವರು, ಸ್ಕೂಲ್‌ಗಳ ಡೆಪ್ಯುಟಿ ಇನ್‌ಸ್ಪೆಕ್ಟರು.

ಉದ್ಯೋಗ ಪ್ರಯುಕ್ತವಲ್ಲದ ಮೆಂಬರುಗಳು.

7. ಮೆ॥ ಪಿ. ಶ್ರೀನಿವಾಸರಾಯರು.
8. ,, ಟಿ. ನರಸಿಂಹಯ್ಯಂಗಾರ್ರು.
9. ,, ಮಾಟರ್ಸ ಸಾಹೇಬರು.
10. ,, ಎಸ್. ಪರುವತಪ್ಪನವರು.
11. ,, ಬಿ. ರಂಗಣ್ಣನವರು.
12. ,, ಕೆ. ಗೋವಿಂದಪ್ಪನವರು.
13. ,, ಎಚ್. ಬಿಲ್ಲಿಂಗರ್ಟ್ ಸಾಹೇಬರು.
14. ,, ದಾವುದ್ ಸಾಹೇಬರು.
15. ,, ಪಿ. ರಂಗಣ್ಣನವರು.
16. ,, ಅಬ್ದುಲ್ ಖಾದರ್ ಸಾಹೇಬರು.
17. ಮೆ॥ ಎ. ಜಂಬೈಗೌಡರು.
18. ,, ಟಿ. ಶ್ರೀನಿವಾಸರಾಯರು.
19. ,, ಜೆ. ಗಣೇಶರಾಯರು.
20. ,, ವೈ. ಶಾಂತಪ್ಪ ಕೆಟ್ಟರು.
21. ,, ಎಂ. ರಾಮಚಂದ್ರರಾಯರು.
22. ,, ಜೆನ್ನೆ ಕೇಶವರಾಯರು.
23. ,, ಎ. ಶಾಮಣ್ಣನವರು.
24. ,, ಹಾಲ್‌ಗಾರ್ ವೆಂಕಟಸುಬ್ಬಯ್ಯನವರು.
25. ಸ್ಥಳ ಖಾಲೀ.

1. ಈ ಕೆಳಗೆ ನಮೂದಿಸಿರುವ ತಪಶೀಲುಳ್ಳ ಮೆ॥ ಕಂಟ್ರೋಲರವರಿಂದ ತನಿಖೆಯಾಗಿ ಬರಿದ 1906ನೆ ಜುಲೈ ಮತ್ತು ಆಗಸ್ಟು ಮಾಹೆಗಳ ಡಿಸ್ಟ್ರಿಕ್ಟ ಫಂಡ್ ಜವಾಬುಖರ್ಚು ಲೆಖ್ಖಗಳನ್ನ ಓದಿ ರಿಕಾರ್ಡು ಮಾಡಲಾಯಿತು.

			ರೂ.	ಆ.	ಪೈ.
1906ನೆ ಇಸವಿ ಜುಲೈ 1ರಲ್ಲು ಶಿಲ್ಕು	...	...	2,445	13	6
1906ನೆ ಆಗಸ್ಟು ಆಖೈರು ವರಿಗೆ	..	...	5,090	6	3
		ಜುಮ್ಲಾ	7,536	3	9
ಜುಲೈ ಮತ್ತು ಆಗಸ್ಟು ಮಾಹೆಗಳಲ್ಲಿ ಖರ್ಚು	...	...	7,446	10	3
		ಜಾತಾ ಬಾಕಿ	89	9	6

2. ಚಿಕ್ಕಮಗಳೂರು—ತರೀಕೆರೆ ಮತ್ತು ಬೀರೂರು ಹೊರ ವೈದ್ಯಶಾಲೆಗಳಲ್ಲಿ ಕಳದ 1906ನೆ ಇಸವಿ ಜುಲೈ 1ರಲಾಗಾಯಿತು ಡಿಸೆಂಬರು ಆಖೈರು ವರಿಗೆ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಗಳನ್ನು ರಿಟರ್ನಸತಕ್ಕ ಲೆಖ್ಖಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು. ಸದರ ವೈದ್ಯಶಾಲೆಗಳಿಗೆ ಚಿಕಿತ್ಸೆಗೋಸ್ಕರ ಬಂದವರ ಸಂಖ್ಯೆಯು ಪರಸ್ಪರ 6175, 8018 ಮತ್ತು 4268 ಆಗಿದ್ದಿತು. ಹಿಂದಿನವರ್ಷ ಇದೇ ಮಾಹೆಗಳಲ್ಲಿ ಸದರಿ ಆಸಪತ್ರೆಗೆ ಕೇರಿದ ರೋಗಿಗಳ ಸಂಖ್ಯೆಯು ಪರಸ್ಪರ 9804, 7313 ಮತ್ತು 1124 ಆಗಿದ್ದಿತು.

3. ಈ ಕೆಳಗೆ ನಮೂದಾಗುವ ಗಾರ್ನ ಮೆಂಟೆ ಆರ್ಡರುಗಳು ಮತ್ತು ಇತರ ಕಾಗದಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

(1) ಸೀನಿಯರ್ ಸರ್ಜರಿರವರು ಪ್ರತಿ ಸಾಲಿನಲ್ಲಿಯೂ ಬಜೆಟ್ಟು ತಯಾರ್ಮಾಡಿ ಡಿಸ್ಟ್ರಿಕ್ಟು ಬೋರ್ಡಿನಲ್ಲಿಡುವದಕ್ಕೆ ತತ್ಪೂರ್ವ ಸದರಿ ಬಜೆಟ್ಟಿನಲ್ಲಿ ಸೇರಿಸಲು ಅನುಕೂಲಿಸುವತೆ ಆಸಪತ್ರೆಗಳಿಗೆ ಶಿಬ್ಬಂದಿ ಖರ್ಚಿಗೂ ಸಾದಿಲ್ವಾರಿಗೂ ದೇಶೀಯ ಅಪೂಪ ಧಗಳು ಕೊಂಡುಕೊಳ್ಳುವದಕ್ಕೆ ಸಹಾ ಬೇಕಾಗುವ ಹಣಗಳನ್ನು ತೋರಿಸುವಂತೆ ಒಂದು ತಪಶೀಲು ಸ್ಟೇಟೆಮೆಂಟು ತಯಾರು ಮಾ

ಡಿಸಿ ಬೋರ್ಡುಗಳ ಪೈಸಿಡಂಟರವರಿಗೆ ಕಳುಹಿಸಬೇಕೆಂತ ತಲಪದ 13—11—06ನೆ ನಮ್ಬರು 3534-43ನೆ—L. B. (299-04)—7 ನಂಬರು ಗಾರ್ನಮೆಂಟು ಆರ್ಡರು.

(2) ಹರಿಹರಪುರದ ಆಸಪತ್ರೆಯನ್ನು ಬಾಳೂರಿಗೆ ವರ್ಗಾಯಿಸತಕ್ಕ ಅಭಿಪ್ರಾಯವನ್ನು ಮಂಜೂರು ಮಾಡಿರುತ್ತೆಂತ ತಲ್ಪಿದ 9—11—06ನೆ ನಮ್ಬರು 3798-9—L. B. (417-05)—06ನೆ ನಂಬರು ಗಾರ್ನಮೆಂಟ್ ಆರ್ಡರು.

(3) ಆಸಪತ್ರೆಗಳಲ್ಲಿ ರೋಗಿಗಳು ವಾಸವಾಗಿರುವ ಕೋಣೆಗಳನ್ನು ಆಸಪತ್ರೆ ಅಸಿಸ್ಟೆಂಟರ ವಾಸಸ್ಥಳಕ್ಕೆ ಅನುಕೂಲಿಸುವಂತೆ ಬದಲಾಯಿಸಬೇಕೆಂಬ ಅಭಿಪ್ರಾಯವನ್ನು ಮಂಜೂರ್ಮಾಡಲು ಆಗುವದಿಲ್ಲ ಂತ ಗಾರ್ನಮೆಂಟಿನಿಂದ ತಲ್ಪಿದ 3783-97—L. B. (357-92) 34ನೆ ನಂಬರ ಗಾರ್ನಮೆಂಟ ಆರ್ಡರು.

(4) ತರೀಕೆರೆಯಲ್ಲಿರುವ ಹಿಂದೂ ವೈದ್ಯಶಾಲೆಯ ಪಂಡಿತರು ತಾಲ್ಲೂಕು ಅಮಲ್ದಾರರವರ ಅಧಿಕಾರಕ್ಕೆ ಒಳಪಟ್ಟರಬೇಕೆಂತಲೂ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಸ್ಟಾಫ್ ಸರ್ಜನಿಟೆರಿ ಆಫಿಸರವರು ಸಾಧಾರಣವಾದ ಮೇಲ್ವಿಚಾರಣೆ ತೆಗದುಕೊಳ್ಳಬೇಕೆಂತಲೂ ಡಿಸ್ಟ್ರಿಕ್ಟ್ ಹಡಿಕ್ವಾರ್ಟರು ಆಲ್ಲದ ಇತರ ಸ್ಥಳಗಳಲ್ಲಿರತಕ್ಕ ವೈದ್ಯಶಾಲೆಗಳಲ್ಲಿಯೂ ಸಹಾ ಡಿಸ್ಟ್ರಿಕ್ಟ್ ಬೋರ್ಡ್ ಪೈಸಿಡಂಟರುಗಳು ಇದೇ ರೀತಿಯಾದ ವಿಚಾರ್ಣೆ ಇಡಿಸಬೇಕೆಂತ ತಲ್ಪಿದ 9—11—06ನೆ ನಮ್ಬರು 4100-8—L. F. (131-06)—2ನೆ ನಂಬರು ಗಾರ್ನಮೆಂಟು ಆರ್ಡರು.

(5) 100 ಮನೆಗಳಿರತಕ್ಕ ಗ್ರಾಮಗಳಲ್ಲಿ ರಸ್ತೆ ಮೂಡ್ರತಕ್ಕ ವಿಚಾರದಲ್ಲಿ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಹುಟ್ಟಿದ 213ನೆ ನಂಬರು ಪ್ರಸ್ತಾಪವನ್ನು ಮತ್ತು ಅದಕ್ಕೆ ಗಾರ್ನಮೆಂಟಿನವರ ಜವಾಬನ್ನು ಸಹಾ ಡಿಸ್ಟ್ರಿಕ್ಟ್ ಬೋರ್ಡಿನ ತಿಳುವಳಿಕೆ ಬಗ್ಯೆ ಕಳುಹಿಸಿರುತ್ತೆಂತ ತಲ್ಪಿದ 11—1—07ನೆ ನಮ್ಬರು ನಂಬರು 6281-8-L. F. (180—06)-1ನೆ ಗಾರ್ನಮೆಂಟ್ ಆರ್ಡರು.

ಗಾರ್ನಮೆಂಟಿನವರ ಜವಾಬು ನೋಟ್ ಮಾಡಿಕೊಂಡಿರುತ್ತೆ. ಹಣ ವದಗಿಸುವದು ಹೇಗೆ?

(6) ಮುನಸಿಪಲ್ ಟವರ್ಗಗಳಲ್ಲಿ ವಸೂಲಾಗುವ ತೆರಿಗೆಯನ್ನು ಆಯಾಯ ಟವರ್ಗಗಳ ಅಭಿವೃದ್ಧಿಗೋಸ್ಕರವೇ ಉಪಯೋಗಿಸುವ ರೀತಿಯಲ್ಲಿ ಗ್ರಾಮಾಂತರಗಳಲ್ಲಿ ವಸೂಲಾಗತಕ್ಕ ಮೊಹತರ್ಫಾ ತೆರಿಗೆಯನ್ನು ಸದರಿ ಗ್ರಾಮಗಳಲ್ಲಿ ಆರೋಗ್ಯಾಭಿವೃದ್ಧಿಯ ವಿರ್ಪಾಡುಗಳಿಗೋಸ್ಕರವಾಗಿ ಉಪಯೋಗಿಸಬೇಕೆಂತಲೂ, ಆರೋಗ್ಯಾಭಿವೃದ್ಧಿಯಿಂದ ಗ್ರಾಮಾಂತರಗಳಲ್ಲಿ ಪ್ರವೇಶಿಸಿ ಅನೇಕ ಜನಗಳನ್ನು ನಾಶಪಡಿಸುವ ಸ್ವಾಂಕ್ರಾಮಿಕ ರೋಗಗಳನ್ನು ನಿವಾರಿಸುವದಕ್ಕೆ ಸಹಕಾರಿಯಾಗುತ್ತೆಂತಲೂ ಸಹಾ ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲಿ ಹುಟ್ಟಿದ 219ನೆ ಪ್ರಸ್ತಾಪಕ್ಕೆ ಸದರಿ ಆರೋಗ್ಯಾಭಿವೃದ್ಧಿಯ ಕಾರ್ಯವು ಡಿಸ್ಟ್ರಿಕ್ಟ್ ಬೋರ್ಡಿನವರ ಕರ್ತವ್ಯವೆಂತಲೂ, ಈ ಕೆಲಸಕ್ಕೋಸ್ಕರ ಮೊಹತರ್ಫಾ ತೆರಿಗೆಯನ್ನು ಕೊಡುವದಕ್ಕೆ ಆಗುವದಿಲ್ಲವೆಂತಲೂ ಗಾರ್ನಮೆಂಟಿನವರು ಕೊಟ್ಟ ರತಕ್ಕ ಜವಾಬನ್ನು ಸಹಾ ತಿಳುವಳಿಕೆ ಬಗ್ಯೆ ಕಳುಹಿಸಿರುತ್ತೆಂತ ತಲ್ಪಿದ 11—1—07ನೆ ನಮ್ಬರು 6289-96—L. F. (186—06)-1ನೆ ನಂಬರು ಗಾರ್ನಮೆಂಟ್ ಆರ್ಡರು.

(7) ಕಿಡುಬು ಹಾಕುವದನ್ನು ಕಲಿಸತಕ್ಕ ಆಲಮ ಮತ್ತು ಕಿಡುಬು ಹಾಕುವದು ಈ ವಿಚಾರದಲ್ಲಿ ನಡೆದಿದ್ದರ ವಿಷಯವಾದ 1905ನೆ ಇಸವಿಯ ರಿಪೋರ್ಟನ್ನು ಪರಿಶೀಲಿಸಿದ ಬಗ್ಯೆ ತಲ್ಪಿದ 16—1—07ನೆ ನಮ್ಬರು 3998-4000—Md. (57—06)-9ನೆ ನಂಬರ್ ಗಾರ್ನಮೆಂಟ್ ಆರ್ಡರು.

4. ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ ಕಳಗೆ ನಮೂದಿಸಿರುವ ಪ್ರಸ್ತಾಪಗೆ ಗಾರ್ನಮೆಂಟಿನವರು ಕೊಟ್ಟ ಜವಾಬನ್ನು 6—9—06ನೆ ನಮ್ಬರು 1953-4 A—L. B. (71—05)-3ನೆ ಗಾರ್ನಮೆಂಟ್ ಆರ್ಡರಿಗೆ ಪೂರ್ವಣಿಯಾಗಿ ತಿಳುವಳಿಕೆ ಬಗ್ಯೆ ಕಳುಹಿಸಿರುತ್ತೆಂತ ತಲ್ಪಿದ 10—12—06ನೆ ನಮ್ಬರು 4859—L. F. (210-06)—1ನೆ ಗಾರ್ನಮೆಂಟ್ ಆರ್ಡರು ಓದಲಾಗಿ ಬೋರ್ಡಿನವರು ಈ ಕೆಲಸಕ್ಕೆ ಹಣ ವದಗಿಸುವದಕ್ಕೆ ಸಾಧ್ಯವಿಲ್ಲವೆಂದು ತಿಳಿಸಲು ವಿಷಾದಯುಕ್ತರಾಗಿರುತ್ತಾರೆಂತ ತೀರ್ಮಾನಿಸಲಾಯಿತು.

ಪ್ರಕಂಸೆಗೆ ಬಂದ ವಿಚಾರ ಹಿಂದೂ ಪ್ರಯಾಣೀಕರ ಉಪಯೋಗಕ್ಕೋಸ್ಕರ ದತ್ತಾತ್ರಿ ಪೀಠದ ಮೇಲೆ ಬಂದು ಮುಸಾಫರ ಖಾನೆ ಕಟ್ಟತಕ್ಕ ವಿಚಾರ—

ಗಾರ್ನಮೆಂಟಿನವರ ಜವಾಬು ಡಿಸ್ಟ್ರಿಕ್ಟ್ ಬೋರ್ಡಿಗೆ ಬರದುಕೊಳ್ಳತಕ್ಕದ್ದಿರುತ್ತೆ.

5. ಕರಡೀಕಾ ಎಸ್ಟೇಟ್ ವಾರ್ಗಹಾಗಿ ಸಂಗಮೇಶ್ವರ ಪೇಟೆಯಿಂದ ಬಿದರೆ ವರಿಗೆ ಮೆ॥ ಏ. ಎಸ್. ಕ್ಯಾಫರ್ಡ್ ಸಾಹೇಬರು ಮಾಡಿರತಕ್ಕ ರಸ್ತೆಯು ಸದರಿ ಎಸ್ಟೇಟಿಗೆ ಮಾತ್ರ ಉಪಯೋಗಕರವಾಗಿರುತ್ತೆಂತಲೂ ರಸ್ತೆಯು ಪ್ರಯಾಣೀಕರ ಉಪಯೋಗದಲ್ಲಿಲ್ಲವೆಂತಲೂ ನಾಟಾ ಸಾಗಿಸತಕ್ಕ ಬಗ್ಯೆ ಈ ರಸ್ತೆಯನ್ನ ಉಪಯೋಗಿಸುತ್ತಲಿರುವ ಫಾರಸ್ಟ್ ಇಲಾಖೆಯವರು ಸದರಿ ರಸ್ತೆಯನ್ನು ಉತ್ತಮಸ್ಥಿತಿಲ್ಲಿಟ್ಟುಕೊಳ್ಳತಕ್ಕ ಬಗ್ಯೆ ವಿನೂ ವಂತಿಗೆ ಕೊಡುವದಿಲ್ಲವೆಂತಲೂ ಈ ಕಾರಣದಿಂದ ಸದರಿ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರ ಆಡಳಿತಕ್ಕೆ ವಹಿಸುವದು ಅನಾವಶ್ಯಕವೆಂತಲೂ ಅಭಿಪ್ರಾಯಪಟ್ಟಿರುವ ಚಿಕ್ಕಮಗಳೂರು ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಮಲಪೂಷಿಸಿ ಬಂದ ಚಿಕ್ಕಮಗಳೂರು ತಾಲ್ಲೂಕ್ ಅಮಲ್ದಾರ್ರವರ 10—12—06ನೆ ನಮ್ಬರು 107ನೆ ನಂಬರು ರಿಪೋರ್ಟು ಓದಲಾಗಿ ಈ ರಸ್ತೆಯು ಸ್ವಲ್ಪವೂ ಜನಗಳ ಉಪಯೋಗದಲ್ಲಿಲ್ಲದೆ ಇರೋಣದರಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ಸದರಿ ರಸ್ತೆಯನ್ನು ವಹಿಸಿಕ್ಕೊಂಡು ಸಾಲಾಬುದು ರಿಪೇರಿ ಮಾಡಲು ಸಿದ್ಧವಾಗಿಲ್ಲವೆಂತ ತೀರ್ಮಾನಿಸಲಾಯಿತು.

6. ಲೋಕಲ್ ಫಂಡ್ ಹಣದ ಪೈಕಿ ಕೆಲವು ಭಾಗವನ್ನು ಗ್ರಾಮಗಳಲ್ಲಿ ಆರೋಗ್ಯಾಭಿವೃದ್ಧಿಯ ವಿರ್ಪಾಡುಗಳನ್ನು ಮಾಡುವ ಉದ್ದಿಶ್ಯ ಉಪಯೋಗಿಸಬೇಕೆಂತಲೂ ಮತ್ತು ಈ ಮೊಬಲಗು ಪ್ರತಿ ವರುಷದಲ್ಲಿಯೂ 50ಕ್ಕಿಂತ ಹೆಚ್ಚು ಮನೆಗಳಿರುವ ಗ್ರಾಮಗಳಿಗೆ ಮಾತ್ರ ಉಪಯೋಗಿಸಬೇಕೆಂತ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ ಪ್ರಸ್ತಾಪವನ್ನು ಡಿಸ್ಟ್ರಿಕ್ಟ್ ಬೋ

ರ್ಡಿನವರ ಆರೋಪನೆ ಬಗ್ಯೆ ಕಳುಹಿಸಿರುತ್ತಂತ ತಲ್ಪಿದ 4—1—07ನೆ ನಂಬ್ರಂ 6041-8—L. F. 185-06ನೆ ನಂಬರು ಸೆಕ್ರೆಟರಿಯವರ ಡಾಕೆಟ್ ಓದಲಾಗಿ ಸದರಿ ಅಂಶವನ್ನು ನೋಟ್ ಮಾಡಿಕ್ಕೊಂಡು ರಿಕಾರ್ಡ್ ಮಾಡಲಾಯಿತು.

7. ಸ್ಯಾನಿಟೇರ್ಷ ರೂಲ್ಸ್ 100 ಮನೆಗಳಿರತಕ್ಕ ಗ್ರಾಮಗಳಲ್ಲಿ ಮಾತ್ರ ಜಾರಿಯಲ್ಲಿರುತ್ತೆಂತಲೂ 50 ಮನೆಗಳಿರತಕ್ಕ ಗ್ರಾಮಗಳಲ್ಲಿಯೂ ಸದರಿ ರೂಲ್ಸು ಜಾರೀಗೆ ಬಂದಲ್ಲಿ ಸದರಿ ಗ್ರಾಮಗಳು ಉತ್ತಮ ಸ್ಥಿತಿಗೆ ಬರುವದಕ್ಕೆ ಅನುಕೂಲಿಸುತ್ತೆಂತ ಸಹಾ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ 223ನೆ ನಂಬರು ಪ್ರಸ್ತಾಪದ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯದೊಡನೆ ರಿಪೋರ್ಟ್ ಮಾಡಬೇಕೆಂತ ತಲ್ಪಿದ 11—1—07ನೆ ನಂಬ್ರಂ 6233-40—L. F. (190—06)-1ನೆ ನಂಬರ್ ಸೆಕ್ರೆಟರಿಯವರ ಡಾಕೆಟ್ ಓದಲಾಗಿ ಸದರಿ ಅಂಶವನ್ನು ನೋಟ್ ಮಾಡಿಕ್ಕೊಂಡು ರೆಕಾರ್ಡ್ ಮಾಡಿಕೊಂಡಿರುತ್ತೆಂತ ತೀರ್ಮಾನಿಸಲಾಯಿತು.

8. ಮಲೆನಾಡ್ ಗ್ರಾಮಗಳಲ್ಲಿನ ರಸ್ತೆಗಳನ್ನು ಮಾಡತಕ್ಕ ಬಗ್ಯೆ ಕೆಲವು ಹಣಗಳನ್ನು ವದಗಿಸಬೇಕೆಂತ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ ಪ್ರಸ್ತಾಪದ ವಿಚಾರದಲ್ಲಿ ಅವಶ್ಯಕವಾದ ನಡವಳಿಕೆ ತಗದುಕೊಳ್ಳಬೇಕೆಂತಲೂ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಅಭಿಪ್ರಾಯವನ್ನು ರಿಪೋರ್ಟ್ ಮಾಡಬೇಕೆಂತಲೂ ಸಹಾ ತಲ್ಪಿದ 11—1—07ನೆ ನಂಬ್ರಂ 6305-7—L. F. (179—06)-1ನೆ ನಂಬರು ಸೆಕ್ರೆಟರಿಯವರ ಡಾಕೆಟ್ ಓದಲಾಗಿ ಇದನ್ನು ನೋಟ್ ಮಾಡಿಕ್ಕೊಂಡಿರಬೇಕೆಂತಲೂ ಇವುಗಳ ಬಗ್ಯೆ ಪ್ರಪೋಜಲಗಳು ಬಂದಾಗ್ಯೆ ಅವುಗಳಿಗೆ ಅವಶ್ಯಕವಾದ ನಿಗಾ ಕೊಡಬೇಕೆಂತಲೂ ಸಹಾ ತೀರ್ಮಾನಿಸಲಾಯಿತು.

9. ಬಹಳ ಜರೂರಾಗಿರೋಣದರಿಂದ ಚಾಲ್ತಿ ಸಾಲಿನಲ್ಲಿಯೇ ನಡಿಯಬೇಕಾಗಿರುವ ಈ ಕೆಳಗೆ ನಮೂದಾಗುವ ಕಾಮುಗಾರಿಗಳ ಬಾಬತು ಅಂದಾಜುಗಳ ಲೀಸ್ಟನ್ನು ಓದಲಾಯಿತು.

	ಮಂಜೂರ್ಮಾಡಿಧೆ. ರೂ.
(1) ಸಖ್ಯಪಟ್ಟಣದ ಮುನಾಫರಖಾನೆಯಬಳಿ ಭಾವಿ ತೆಗಿಯುವದಕ್ಕೋಸ್ಕರ ಅಜಮಾಯಿಷಿ ತರೇಕ ಬರದು ಗುಂಡಿ ತಗಿಯತಕ್ಕ ಬಗ್ಯೆ.	58
(2) ಕೆರೆ ಹೊಸಹಳ್ಳಿ ಭಾವಿಯನ್ನು ಆಳ ಮಾಡುವದಕ್ಕೋಸ್ಕರ ತಯಾರಾಗಿ ಬಂದ ಸುಮ್ಮ ಮೆಂಟಲ್ ಅಂದಾಜಿ.	180
(3) ಕಡೂರು ತಾಲ್ಲೂಕು ಕುರುಬರಹಳ್ಳಿಯಲ್ಲಿ ಬಂದು ಭಾವಿ ತೆಗಿಯತಕ್ಕ ಬಗ್ಯೆ ತಯಾರಾಗಿ ಬಂದ ಸುಮ್ಮ ಮೆಂಬರ್ ಅಂದಾಜಾ.	79
(4) ಚಿಕ್ಕ ತಂಗಲಿಯಲ್ಲಿ ಒಂದು ಭಾವಿ ತೆಗಿಯತಕ್ಕ ಬಗ್ಯೆ ತಯಾರಾಗಿ ಬಂದ ಅಂದಾಜಾ	210
(5) ದಂಟ್ಯಮಕ್ಕಿ-ಹಿರೇಮಗಳೂರು ರಸ್ತೆ ರಿಪೇರಿ ಮಾಡತಕ್ಕ ಬಗ್ಯೆ	60
(6) ಸಖ್ಯಪಟ್ಟಣದ ಹೋಬಳಿ ಅಗ್ರಹಾರದ ಭಾವಿಗೆ ಕಲ್ಲು ಕಾಮುಗಾರಿ ಮಾಡತಕ್ಕ ಬಗ್ಯೆ ತಯಾರಾಗಿ ಬಂದ ಸುಮ್ಮ ಮೆಂಟಲ್ ಅಂದಾಜಾ.	96

10. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮಿಟಿಂಗು 28—2—07ನೆ ಗುರುವಾರ ನಡಿಯತಕ್ಕದ್ದೆಂತ ತೀರ್ಮಾನಿಸಲಾಯಿತು.

ಎಂ. ಲಕ್ಷ್ಮಣಶಾಸ್ತ್ರಿ,
ವೈಸ್ ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 16ನೆ ಮಾರ್ಚಿ 1907.

1907ನೆ ಇಸವಿ ಫೆಬ್ರವರಿ ತಾರೀಖು 14ನೆ ಗುರುವಾರ ನಡದ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡ್ ಮಿಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಮು॥ ರಾ॥ ಎಂ. ಚೆಂಗಪ್ಪ ಶೆಟ್ಟರವರು, ಪ್ರೆಸಿಡೆಂಟ್.

ಅಫಿಷಿಯಲ್ ಮೆಂಬರುಗಳು.

1. ಮೆ॥ ಡಬ್ಬಿಯು. ಶ್ರೀನಿವಾಸೈಯ್ಯಂಗಾರ್ಯವರು, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
2. ,, ಬಿ. ಭೀಮರಾಯರವರು, ವೈಸ್ ಪ್ರೆಸಿಡೆಂಟರು.
3. ,, ಬಿ. ಜೆ. ಕುಮಾರಸ್ವಾಮಿ ಸಾಯಕರವರು, ಜಳ್ಳಕೆರೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರು.
4. ,, ಚಿತ್ರದುರ್ಗದ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರು.
5. ,, ದಾವಣಗೆರೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.

ನ್ಯೂನ್ ಹಾಜರು.

1. ಮೆ॥ ಚಿತ್ರದುರ್ಗದ ಡಿಸ್ಟ್ರಿಕ್ಟು ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರವರು.